ಮಾಡಿದರು. ಅಲ್ಲಿ ಅವರಣ್ಣ ದೇವರಾಜ ಬಾಲ್ಯದಲ್ಲೇ ಸತ್ತಿದ್ದಾನೆ. ನಿನ್ನೆಯ ದಿನ ಬಸವ ಮತ್ತು ನಾಗಮ್ಮ ಹಾಗೂ ಶರಣ ಪರಿವಾರದವರ ಕೊಲೆ ಆಗಿದೆ' ಎಂದು ಮುದುಕ ಹೇಳಿದ, ನಿನ್ನೆ ಬಂದ ಸುದ್ದಿ ಇದು. ಬಿಸಿ ಬಿಸಿ ಸುದ್ದಿ ಎಂದು ಹೇಳಿದ, ಮನೆಯ ಪಕ್ಕದಲ್ಲಿದ್ದ. ಬೊಮ್ಮಪ್ಪ ಎನ್ನುವ ಮುದುಕ ಬಂದ. ನನ್ನನ್ನು ನೋಡಿದೊಡನೆಯೇ ಈತನೇ ಬಸವ, ಈತನೇ ಬಸವ. ನಾನು ಕಲ್ಯಾಣಕ್ಕೆ ಸುಮಾರು ಹತ್ತು ಬಾರಿಯಾದರೂ ಹೋಗಿದ್ದೇನೆ. ಈತನೇ ನನ್ನಪ್ಪ ಎಂದು ಕಿರುಚಿದ. ಬೊಮ್ಮಪ್ಪನಿಗೆ ತಲೆ ಕೆಟ್ಟಿದೆ ಎಂದು ಸುಮ್ಮನೆ ಕುಳ್ಳಿರಿಸಲಾಯಿತು.

ಈ ಮನೆಯನು ನೋಡಲು ಜನ ಆಗಾಗ ಬರುತ್ತಿರುತ್ತಾರೆ. ಅದರಂತೆ ಇವರು ಬಂದಿದ್ದಾರೆ ಎಂದು ಜನ ತಿಳಿದುಕೊಂಡರು. ನಾನು ಆಟವಾಡಿದ ಸ್ಥಳಗಳು ಪಾಠ ಹೇಳಿಸಿಕೊಳ್ಳುತ್ತಿದ್ದ ಸ್ಥಳ, ಜನಿವಾರವನ್ನು ಕಿತ್ತೊಗೆದ ಸ್ಥಳಗಳು, ಅಲ್ಲಲ್ಲಿ ಜಾಗ ಬದಲಾವಣೆ ಬಯಸದೇ ಇದ್ದವು.

ಕೊಂಚ ಒಳಹೋಗಿ ನೋಡಿದೆ. ಮಣ್ಣಿನಲ್ಲಿ ಮುರಿದ ತೊಟ್ಟಿಲೊಂದು ಸಿಕ್ಕಿಕೊಂಡಿತ್ತು. ಸಾಗವಾನಿ ಕಟ್ಟಿಗೆಯಿಂದ ಮಾಡಿದ್ದ ಆ ತೊಟ್ಟಿಲು ಸಂಪೂರ್ಣ ನನ್ನ ಬಾಲ್ಯದ ದಿನಗಳಿಗೆ ಕನ್ನಡಿ ಹಿಡಿದಿತ್ತು. ಅಕ್ಕ ನಾಗಾಯಿಗೆ ಈ ತೊಟ್ಟಿಲದಲ್ಲಿ ಹಾಕಿ ನನ್ನನ್ನು ತೂಗುವುದು ಯಾವಾಗಲೂ ಇಷ್ಟ. ನಾನು ದೊಡ್ಡವನಾದರೂ ನನ್ನನ್ನು ಹಿಡಿದು, ಈ ತೊಟ್ಟಿಲೊಳಗೆ ಕೂಡ್ರಿಸಿ ತೂಗುತ್ತಿದ್ದಳು. ಅದೇ ತೊಟ್ಟಿಲು ಇದು. ನಾನು ಮಣ್ಣಿನಲ್ಲಿ ಹೂತುಹೋಗಿದ್ದ ಆ ತೊಟ್ಟಿಲನ್ನು ಎತ್ತಲು ಹೋದೆ. ಅಪ್ಪಣ್ಣನವರು ಸಹ, ನನ್ನ ಜೊತೆ ಕೈ ಜೋಡಿಸಿದರು. ಆ ತೊಟ್ಟಿಲು ಕಿತ್ತಲು ಸಹಾಯ ಮಾಡುತ್ತಿರುವಾಗಲೇ ಆ ರಾಮಕ್ರಮಿತ ಎಂಬ ಮುದುಕ, 'ಏನು ಮಾಡುತ್ತಿರುವಿರಿ, ಇದು ನನ್ನ ಮನೆ, ನನ್ನ ಜಾಗ' ಎಂದು ವರಾತ ತೆಗೆದ. ಅಪ್ಪಣ್ಣನವರು ಆ ಮುದುಕನಿಗೆ ನಾವು ಶೋಧಿಸಲು ಬಂದ ರಾಜಾಧಿಕಾರಿಗಳು ಎಂದು ಹೇಳಿ ಸುಮ್ಮನಾಗಿಸಿದರು. ತೊಟ್ಟಿಲು ಹೇಗೋ ಕಿತ್ತು ಹೊರಗೆ ತೆಗೆದೆವು. ತೊಟ್ಟಿಲಿಗೆ ನಾಲ್ಕು ಕಡೆ ಲಿಂಗ ಮುದ್ರೆಗಳಿದ್ದವು. ತೊಟ್ಟಿಲು ತೆಗೆಯುವಾಗ ಅದರ ಜೊತೆ ಕೆಲ ತಾಮ್ರಪಟಗಳು ಮಣ್ಣಿನಲ್ಲಿ ಹೂತಿದ್ದವಲ್ಲ, ಅದೆಲ್ಲ ಕಿತ್ತುಕೊಂಡು ಬಂದವು.

ನಾನು ಓದಿದೆ. ಬಾಗೇವಾಡಿಯ ಪುರವರಾಧೀಶ್ವರ ಮಾದರಸರಿಗೆ ನಂದೀಶ್ವರನ ಪೂಜಾ ಕೈಂಕರ್ಯ ಮಾಡಲು ಹಾಗೂ ಧರ್ಮಕಾರ್ಯ ನೆರವೇರಿಸಲು ಇಂಗಳೇಶ್ವರ ದಾರಿಗೆ ಹೋಗುವಾಗ ಬಲಬದಿಗೆ ಇರುವ ಹೊಲವನ್ನು ಉಂಬಳಿಯಾಗಿ ಕೊಟ್ಟ ವಿವರವಿತ್ತು. ನನ್ನಪ್ಪ ಮಾದರಸರು ಬಹಳ ಮೃದು ಸ್ವಭಾವದವರಾಗಿದ್ದರು. ಯಾರಿಗೂ ಏನು ಅನ್ನದ, ಬಂದ ತನ್ನ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳದ, ಎಂದೂ ತನ್ನ ಅಧಿಕಾರವನ್ನು ಅಧಿಕಾರಕ್ಕಾಗಿ ಚಲಾಯಿಸದ ಮನುಷ್ಯರಾಗಿದ್ದರು. ಸೋದರಮಾವ ಬಲದೇವರಿಂದ ಇಂಥ ಪುರಪಾಲಕ ಹುದ್ದೆ ದಕ್ಕಿತ್ತಾದರೂ ಇದು ಕಬ್ಬಿಣದ ಕಡಲೆಯಾಗಿತ್ತು. ಸುತ್ತಲಿನ ವೈದಿಕರು ನಮ್ಮ ಕುಟುಂಬವನ್ನು ಬಹು ತುಚ್ಛವಾಗಿ ನೋಡುತ್ತಿದ್ದರು. ನಮ್ಮನ್ನು ಯಾವುದೇ ತಮ್ಮ ಕಾರ್ಯಗಳಿಗೆ ಆಹ್ವಾನಿಸುತ್ತಿದ್ದಿಲ್ಲ. ಯಜ್ಞ ಯಾಗಗಳನ್ನು ನಾವು ಮಾಡುತ್ತಿದ್ದಿಲ್ಲ. ಕರುಣಾಮಯಿಯಾಗಿದ್ದ ತಂದೆ ತಾಯಿಗಳು ಬಡವರ ಬಗ್ಗೆ ಕರುಣೆ ಇದ್ದವರಾಗಿದ್ದರು.

ಇನ್ನೊಂದು ತಾಮ್ರಪಟ ಸಿಕ್ಕಿತು. ಅಕ್ಷರಗಳು ಬಹಳ ಮಬ್ಬು ಮಬ್ಬಾಗಿದ್ದವು. ಆದರೂ ಓದಬಹುದಾಗಿತ್ತು. ಅದರಲ್ಲಿ ನನ್ನಣ್ಣ ದೇವರಾಜನ ಮರಣದ ಬಗ್ಗೆ ಅಭಿಪ್ರಾಯವಿತ್ತು ಹಾಗೂ ಆತನ ಶ್ರಾದ್ಧಕ್ಕಾಗಿ ಯಾರೆಲ್ಲ ಬಂದಿದ್ದರು ಹಾಗೂ ಕೂಡಲಸಂಗಮದ ಈಶಾನ್ಯ ಗುರುಗಳು ಪರಮ ಆಶೀರ್ವಾದ ಎಂದು ಬರೆಯಲಾಗಿತ್ತು. ನನಗೆ ಕಣ್ಣೀರು ಕಿತ್ತು ಬಂದವು. ಅಪ್ಪಣ್ಣಗೆ ಗೊತ್ತಿಲ್ಲದೆ ಒರೆಸಿಕೊಂಡೆ. ಮಣ್ಣು ಕಣ್ಣಲ್ಲಿ ಬಿದ್ದಂತೆ ನಾಟಕ ಮಾಡಿದೆ. ಆದರೂ ಬಹು ಚಾಣಾಕ್ಷರಾದ ಅಪ್ಪಣ್ಣಗಳು ಅದು ಹೇಗೋ ಕಂಡುಹಿಡಿದು ಸಮಾಧಾನ ಮಾಡಿದರು. ಕಣ್ಣೊರೆಸಿಕೊಳ್ಳಲು ವಸ್ತ್ರವನ್ನು ಕೊಟ್ಟರು. ನಾಗಾಯಿ ಅಕ್ಕ ಹೇಳುತ್ತಿದ್ದಳು. ಅಪ್ಪ ಅಮ್ಮ ಇಬ್ಬರನ್ನು ಶರಣ ಧರ್ಮಕ್ಕೆ ತರಬಹುದಾಗಿತ್ತು, ಅವರು ಅಂತಹ ಸರಳ ಶರಣರು ಎಂದು. ಆದರೆ ಅವರು ಆಗಲೇ ಕೈಲಾಸವಾಸಿಗಳಾಗಿದ್ದರು. ಲಿಂಗ ಮುದ್ರೆಯ ತೊಟ್ಟಿಲು ಇದು ನಿಸ್ಸಂಶಯವಾಗಿ ನನ್ನದೇ ತೊಟ್ಟಿಲು. ನಾನು ನನ್ನಣ್ಣ ದೇವರಾಜ ನನ್ನ ಅಕ್ಕ ನಾಗಾಯಿ ಇದರಲ್ಲೇ ಆಡಿ ಬೆಳೆದು ದೊಡ್ಡವರಾಗಿದ್ದೆವು. ಇಷ್ಟರಲ್ಲಿ ರಾಮಕ್ರಮಿತ ಇನ್ನೂ ಆರು ಜನರನ್ನು ಕರೆದುಕೊಂಡು ಬಂದ. ಅವರು 'ಇಲ್ಲಿ ಏನು ಮಾಡುತ್ತಿರುವಿರಿ? ಇದು ನಮ್ಮ ಸಂಬಂಧಿಗಳ ಮನೆ, ಅವರು ಯಾರು ಈಗ ಬದುಕಿಲ್ಲ ಏನಾಗಬೇಕು' ಎಂದರು. 'ಏನು ಇಲ್ಲ ಬಸವನ ಮನೆ ನೋಡಲು ಬಂದಿದ್ದೆವು' ಎಂದು ಅಪ್ಪಣ್ಣನವರು ಹೇಳಿದರು. 'ಬಸವನಿಗೆ ನಿನ್ನೆ ಮರಣದಂಡವಾಯಿತು' ಎಂದು ಒಬ್ಬ, 'ಇಲ್ಲ ಗಡಿಪಾರು' ಎಂದು ಇನ್ನೊಬ್ಬ. 'ಇಲ್ಲ ಕಲ್ಯಾಣದಲ್ಲಿ ಸೆರೆಮನೆಗೆ ಹಾಕಿದ್ದಾರಂತೆ' ಎಂದು ಮತ್ತೊಬ್ಬ ಮಾತಾಡುವುದು ಕಿವಿಗೆ ಬೀಳುತ್ತಿತ್ತು. 'ಆಗಮ ವೇದ ಶಾಸ್ತ್ರಗಳ ವಿರುದ್ಧ ತಿರುಗಿಬಿದ್ದರೆ ಗತಿ ಹೀಗೆ ಆಗುವುದು' ಎಂದು ಹೇಳಿದರು. ಅಪ್ಪಣ್ಣನವರಿಗೆ



ಅವರ ಮಾತುಗಳಿಂದ ನಿಜಕ್ಕೂ ದುಃಖವಾಯಿತು.

ಅಪ್ಪಣ್ಣನವರು ದಣ್ಣಾಯಕರೇ, ನಾವು ಹೋಗೋಣವೇ ಎಂದರು? ದಣ್ಣಾಯಕರು ಎಂಬ ಶಬ್ದ ಕಿವಿಗೆ ಬಿದ್ದ ತಕ್ಷಣವೇ ಆರು ಜನರಿಗೆ ಇವರು ಸೈನ್ಯದ ದಂಡನಾಯಕರು ಎಂದು ಕಿವಿಗೆ ಬಿದ್ದಂತಾಗಿ ಇವರು ದಂಡನಾಯಕರೆ ಎಂದು ಕೇಳಿದರು. ಹೌದು ಎಂದು ಅಪ್ಪಣ್ಣನವರೇ ಹೇಳಿದರು. ಅವರು ಅಂಜಿ ದೂರ ನಿಂತರು. ನಾವು ಹೊರಡಲು ಅನುವಾದೆವು. ನಾನು ನನ್ನ ಹಾಳುಬಿದ್ದ ಮನೆಯನ್ನು ನೋಡುತ್ತ ಕ್ಷಣ ಹೊತ್ತು ನಿಂತೆ. ಬಹಳ ದುಃಖವಾಯಿತು. ಬಾಗುಡಿಯ ಪುರವರಾಧೀಶ್ವರನ ಮನೆ ಹೀಗೆ ಹಾಳುಕೊಂಪೆಯಾಗಿದ್ದು ಕಂಡು ದುಃಖವಾಯಿತು.

ಸಂಗಮನಲಿ ಬೇಡಿಕೊಂಡೆ, ದೇವ ಸಂಗಮನಾಥ ನನ್ನ ಈಗಿನ ಹಾಳುಬಿದ್ದ ಮನೆಯಂತೆ ಕಲ್ಯಾಣವನ್ನು ಮಾಡಬೇಡ. ಈ ಮೂವತ್ತು ವರ್ಷಗಳಿಂದ ಕಲ್ಯಾಣ ಹೇಗೆ ಇತ್ತೊ ಹಾಗೆ ಇರಲಿ ಎಂದು ಸಂಗಮದತ್ತ ಹೊರಡಲು ಅನುವಾದೆವು. ಅಲ್ಲಿದ್ದವರಿಗೆ ಮತ್ತೊಮ್ಮೆ ಶರಣು ಹೇಳಿ ಮೆಲ್ಲನೆ ಹೆಜ್ಜೆ ಹಾಕಿದೆವು. ಬೊಮ್ಮಪ್ಪ, ಮೆಲ್ಲಮೆಲ್ಲನೆ ನಮ್ಮ ಹಿಂದೆ ಬಂದ.

ಆತನ ಮನಸ್ಸು ನಾನೇ ಬಸವನೆಂಬುದನ್ನು ಸಾರಿ ಸಾರಿ ಹೇಳುತ್ತಲಿತ್ತು. ಬಂದವನೇ ಅಪ್ಪ ಮಾದರಸರ ಹಾಗೂ ತಾಯಿ ಮಾದಲಾಂಬಿಕೆಯ ಸಮಾಧಿ ನೋಡುವುದಿಲ್ಲವೇ ಎಂದು ಕೇಳಿದ. ನಾನು ತಕ್ಷಣವೇ ನೋಡುವೆ ಎಂದು ಹೇಳಿದೆ. ಆಗ ಅವನು ಜೋರಾಗಿ ನನ್ನನ್ನು ತಬ್ಬಿಕೊಂಡ, ನಾನೂ ತಬ್ಬಿಕೊಂಡೆ. ನೀನೇ ಬಸವ ನೀನೇ ಬಸವ, ಹುಸಿಯು ನುಡಿಯಲು ಬೇಡ ಅಂದವನು ಹುಸಿಯ ನುಡಿಯುತ್ತೀಯಾ ಅಂದ. ಅವನ ಮಾತು ನನಗೆ ಆತ್ಮಸಾಕ್ಷಿ ಕಲಕಿದಂತಾಯಿತು.

ಹೌದು, ನಾನೇ ನತದೃಷ್ಟ ಆ ಬಸವ ಎಂದು ಕಣ್ಣಲ್ಲಿ ನೀರು ತಂದುಕೊಂಡೆ, ಬೊಮ್ಮಪ್ಪನು ಅಳಹತ್ತಿದ, ಏನು ಮಾಡಲಿ ನಾನು ಭ್ರಷ್ಟನಾಗಿದ್ದೇನೆ, ಇದು ಕಲಚೂರಿಗಳ ಊರು. ಇಲ್ಲಿ ಅವರ ಅಧಿಕಾರಿಗಳಿದ್ದಾರೆ. ನಾನು ನನ್ನಪ್ಪನ ಕೂಡಲ ಸಂಗನಲ್ಲಿಗೆ ಹೋಗಲೇಬೇಕು. ಆತ ನಮ್ಮ ಅಪ್ಪ ಅಮ್ಮರ ಸಮಾಧಿ ಹತ್ತಿರ ಕರೆದುಕೊಂಡು ಹೋದ. ಅವು ಆಗಲೇ ನೆಲಸಮವಾಗಿದ್ದವು. ಬೊಮ್ಮಪ್ಪನೇ ಅಮಾಸೆ ಹುಣ್ಣಿಮೆಗೆ ನೆಲ ಸಾರಿಸಿ, ಪೂಜೆ ಸಲ್ಲಿಸುತ್ತೇನೆ ಎಂದು ಹೇಳಿದ. ಚಿಕ್ಕವನಾಗಿದ್ದಾಗಿನಿಂದಲೂ ನನ್ನ ಮನೆಯಲ್ಲಿಯೇ ಇದ್ದ ಬೊಮ್ಮಪ್ಪನಿಗೆ ನಾನು ನನ್ನ ಅಕ್ಕ, ನಾಗಾಯಿ, ಕೆಂಚೆಡೆಗಳ ಶಿವನೆನ್ನುತ್ತಿದ್ದೆವು.

ಬಾಗೇವಾಡಿಯ ತುಂಬಾ ನನ್ನದೇ ಮಾತು. ಎಲ್ಲಿ ನೋಡಿದರೂ ನನ್ನದೇ ಮಾತುಕತೆ, ಸೋಮಿದೇವ ನನ್ನನ್ನು ತಮ್ಮ ರಾಜ್ಯದಿಂದ ಹೊರದಬ್ಬಿದ ನಂತರ ಗೂಢಾಚಾರರನ್ನು ಬಹು ಜಾಗೃತಗೊಳಿಸಿದ್ದ. ಅದಕ್ಕಾಗಿ ಅಲ್ಲಿ ಬಹಳ ಹೊತ್ತು ನಿಲ್ಲುವಂತಿರಲಿಲ್ಲ. ಬೊಮ್ಮಪ್ಪನಿಗೆ ಗಾಢವಾಗಿ ತಬ್ಬಿಕೊಂಡು ನಾವು ಸಂಗಮದತ್ತ ಹೊರಟೆವು.

ಪ್ರತಿಕ್ರಿಯಿಸಿ: feedback@sudha.co.in